For more job news visit : www.kpscvaani.com

ದಿ ಮಲ್ನಾಡ್ ಪ್ರೊಗ್ರೆಸಿವ್ ಎಜ್ಯುಕೇಶನ್ ಸೊಸೈಟಿ (ರಿ.) ಹೊನ್ನಾವರ
ಪ್ರಧಾನ ನಗರ, ತಾ: ಹೊನ್ನಾವರ - 581 334, ಜಿ: ಉತ್ತರ ಕನ್ನಡ, ಕರ್ನಾಟಕ
ಫೋ:08387-220293, ಮೊ: 9916719377, Email: mpeshnr@gmail.com
ವೆಬ್‌ಸೈಟ್: www.admchonavar.org

ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಲಾ, ವಿಜ್ಞಾನ ಮತ್ತು ವಾಣಿಜ್ಯ
ಮಹಾವಿದ್ಯಾಲಯ, ಹೊನ್ನಾವರ, ಉತ್ತರ ಕನ್ನಡ

ಬೇಕಾಗಿದ್ದಾರೆ

ಮಲ್ನಾಡ್ ಪ್ರೊಗ್ರೆಸಿವ್ ಎಜ್ಯುಕೇಶನ್ ಸೊಸೈಟಿ (ರಿ) ಹೊನ್ನಾವರ ಇದರ ಆಡಳಿತಕ್ಕೊಳಪಟ್ಟ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಮಹಾವಿದ್ಯಾಲಯದಲ್ಲಿ ಖಾಲಿ ಇರುವ ಬೋಧಕರ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಮಾನ್ಯ ಅಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ: ಕಾಶಿಇ/223/ಖಾಹುಭ/2017-18/ಧಾವಿ/ನೇವಿ-2, ದಿನಾಂಕ: 21-02-2023 ರ ನಿರ್ದೇಶನದಂತೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಕ್ರ.ಸಂ.	ವಿಷಯ	ಹುದ್ದೆಗಳ ಸಂಖ್ಯೆ	ಮೀಸಲಾತಿ
1	ರಸಾಯನಶಾಸ್ತ್ರ	01	ಪರಿಶಿಷ್ಟ ಜಾತಿ -01
2	ಪ್ರಾಣಿಶಾಸ್ತ್ರ	01	ಪರಿಶಿಷ್ಟ ಜಾತಿ - 01
3	ಭೌತಶಾಸ್ತ್ರ	02	ಪರಿಶಿಷ್ಟ ಜಾತಿ-01 ಪರಿಶಿಷ್ಟ ಪಂಗಡ -01
4	ಗಣಿತಶಾಸ್ತ್ರ	01	ಪರಿಶಿಷ್ಟ ಜಾತಿ-01
5	ವಾಣಿಜ್ಯಶಾಸ್ತ್ರ	02	ಪರಿಶಿಷ್ಟ ಜಾತಿ-01 ಸಾಮಾನ್ಯ ವರ್ಗ - 01
6	ಗ್ರಂಥಪಾಲಕರು	01	ವಿಕಲ್ಪತಿ ವಿಭಾಗ (ಮೀಸಲಾತಿ ಅನ್ವಯಿಸುವುದಿಲ್ಲ)

1) ವಿದ್ಯಾರ್ಹತೆ: ಆಯಾ ವಿಷಯದ ಸ್ನಾತಕೋತ್ತರ ಪದವಿಯಲ್ಲಿ ಕನಿಷ್ಠ ಶೇಕಡಾ 55% ಅಂಕಗಳನ್ನು ಪಡೆದಿರಬೇಕು. (ಪ.ಜಾ. ಮತ್ತು ಪ.ಪಂ. ಅಭ್ಯರ್ಥಿಗಳಿಗೆ ಶೇಕಡಾ 50% ಅಂಕಗಳು) ಎನ್.ಇ.ಟಿ./ಎಸ್.ಎಲ್.ಇ.ಟಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. ಕೋರ್ಸ್‌ವರ್ಕ್‌ನೊಂದಿಗೆ ಪಿಎಚ್.ಡಿ. ಪದವಿಯನ್ನು ಪಡೆದಿರುವ ಅಭ್ಯರ್ಥಿಗಳಿಗೆ ಎನ್.ಇ.ಟಿ./ಎಸ್.ಎಲ್.ಇ.ಟಿ. ಪರೀಕ್ಷೆಯಿಂದ ವಿನಾಯಿತಿ ಇರುತ್ತದೆ. ದಿನಾಂಕ:11-07-2009 ರ ಪೂರ್ವದಲ್ಲಿ ಪಿಎಚ್.ಡಿ. ಪದವಿ ಪಡೆದಿದ್ದಲ್ಲಿ, ಪಿಎಚ್.ಡಿ. ನೋಂದಣಿ ಮಾಡಿಸಿದ್ದಲ್ಲಿ ಅಂತಹ ಅಭ್ಯರ್ಥಿಗಳು ದಿನಾಂಕ:04-05-2016ರ ಯು.ಜಿ.ಸಿ. ಅಧಿಸೂಚನೆಯಲ್ಲಿ ಹೊರಡಿಸಿರುವ ನಿಯಮಗಳನ್ನು ಪೂರೈಸುವ ಪರತ್ತಿಗೊಳಪ್ಪಟ್ಟಿರುತ್ತದೆ. ದಿನಾಂಕ:11-07-2009 ರ ನಂತರದ ಯಾವುದೇ ನೇಮಕಾತಿಗೆ ಎಂ.ಫಿಲ್. ವಿದ್ಯಾರ್ಹತೆ ಪರಿಗಣಿಸಲಾಗುವುದಿಲ್ಲ. ಸರಕಾರ ಹಾಗೂ ಯು.ಜಿ.ಸಿ. ನಿಯಮಾವಳಿಗಳ ಪ್ರಕಾರ ಆಯ್ಕೆ ಪ್ರಕ್ರಿಯೆಯನ್ನು ನಡೆಸಲಾಗುವುದು.

2) ವಯೋಮಿತಿ: ಅರ್ಜಿ ಸಲ್ಲಿಸುವ ಕೊನೆಯ ದಿನಾಂಕದಂದು ಅಭ್ಯರ್ಥಿಗಳು ಗರಿಷ್ಠ ವಯೋಮಿತಿಯನ್ನು ಮೀರಿರಬಾರದು. (ದಿನಾಂಕ: 20-06-2018 ರ ಸರ್ಕಾರದ ಆದೇಶ ಸಂಖ್ಯೆ: ಇಡಿ/49/ಯುಪಿಸ/2018ರ ಪ್ರಕಾರ ಪ.ಜಾ., ಪ.ಪಂ. ಮತ್ತು ಪ್ರವರ್ಗ-1 ಗರಿಷ್ಠ 45, ಇತರೆ ಹಿಂದುಳಿದ ವರ್ಗ ಗರಿಷ್ಠ 43 ಹಾಗೂ ಸಾಮಾನ್ಯ ವರ್ಗ ಗರಿಷ್ಠ - 40 ವರ್ಷಗಳು). ದಿನಾಂಕ: 13-12-2018ರ ಸಂಖ್ಯೆ: ಇಡಿ/87/ಯುಪಿಸ/2016ರ ಸರ್ಕಾರದ ಸೇರ್ಪಡೆ ಆದೇಶದನ್ವಯ, ಖಾಸಗಿ ಅನುದಾನಿತ ಪದವಿ ಕಾಲೇಜುಗಳಲ್ಲಿ ಪೂರ್ಣಕಾಲಿಕ ಬೋಧನಾನುಭವ ಹೊಂದಿರುವ ಅಭ್ಯರ್ಥಿಗಳಿಗೆ ಮೇಲಿನಂತೆ ಗರಿಷ್ಠ ವಯೋಮಿತಿಯನ್ನು ನಿಗದಿಪಡಿಸುವುದರೊಂದಿಗೆ ಅವರು ಬೋಧನಾನುಭವ ಹೊಂದಿರುವ ಸೇವಾವಧಿ ಅಥವಾ 5 ವರ್ಷಗಳು ಇವುಗಳಲ್ಲಿ ಯಾವುದು ಕಡಿಮೆಯೋ ಅಷ್ಟು ಅವಧಿಯನ್ನು ಗರಿಷ್ಠ ವಯೋಮಿತಿಯಲ್ಲಿ ವಿನಾಯಿತಿಯನ್ನು ಪರಿಗಣಿಸಲಾಗುವುದು.

3) ವೇತನ: ಯು.ಜಿ.ಸಿ. ನಿಯಮಾನುಸಾರ ವೇತನ ಶ್ರೇಣಿ ನಿಗದಿಪಡಿಸಲಾಗುವುದು.

4) ಅರ್ಹ ಅಭ್ಯರ್ಥಿಗಳು ತಮ್ಮ ಅರ್ಜಿಯನ್ನು ಸ್ವ-ಪರಿಚಯ ಪತ್ರ ಮತ್ತು ಅಗತ್ಯ ಪ್ರಮಾಣಪತ್ರಗಳ ದೃಢೀಕೃತ ಪ್ರತಿಗಳೊಂದಿಗೆ ಪ್ರಕಟಣೆ ಹೊರಡಿಸಿರುವ ದಿನಾಂಕದಿಂದ 21 ದಿನಗಳೊಳಗಾಗಿ **ಅಧ್ಯಕ್ಷರು, ಎಂ.ಪಿ.ಇ. ಸೊಸೈಟಿ, ಪ್ರಧಾನ ನಗರ, ಹೊನ್ನಾವರ -581334 (ಉ.ಕ.)** ಇವರಿಗೆ ತಲುಪುವಂತೆ ಕಳುಹಿಸತಕ್ಕದ್ದು. ಸೇವೆಯಲ್ಲಿರುವ ಅಭ್ಯರ್ಥಿಗಳು ತಮ್ಮ ಸಂಸ್ಥೆಯ/ಇಲಾಖೆಯ ಮುಖ್ಯಸ್ಥರ ಮೂಲಕ ಅರ್ಜಿಯನ್ನು ಸಲ್ಲಿಸತಕ್ಕದ್ದು. ಪ.ಜಾ., ಪ.ಪಂ. ಮತ್ತು ಪ್ರವರ್ಗ-1 ಅಭ್ಯರ್ಥಿಗಳು ರೂ. 1000/- ಹಾಗೂ ಇತರರು ರೂ. 2000/- ಬ್ಯಾಂಕ್ ಡಿ.ಡಿ.ಯನ್ನು ಅರ್ಜಿಯೊಂದಿಗೆ ಸಲ್ಲಿಸಬೇಕು. (ಮರುಪಾವತಿಸಲಾಗುವುದಿಲ್ಲ) (D.D. in favour of "PRESIDENT, MALNAD PROGRESSIVE EDUCATION SOCIETY HONAVAR") ಪರಿಪೂರ್ಣವಿಲ್ಲದ ಹಾಗೂ ನಿಗದಿತ ದಿನಾಂಕದ ನಂತರ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಅಲ್ಲದೇ ತಮ್ಮ ಅರ್ಜಿಯ ಒಂದು ಪ್ರತಿಯನ್ನು **"ಪ್ರಾದೇಶಿಕ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಮಿನಿ ವಿಧಾನಸೌಧ, ಧಾರವಾಡ"** ಇವರಿಗೆ ನಿಗದಿತ ದಿನಾಂಕದ ಒಳಗೆ ಸಲ್ಲಿಸುವಂತೆ ಸೂಚಿಸಲಾಗಿದೆ. ಸಂದರ್ಶನಕ್ಕೆ ಆಹ್ವಾನ ಪಡೆದ ಅಭ್ಯರ್ಥಿಗಳು ಮೂಲ ದಾಖಲೆಗಳೊಂದಿಗೆ ತಮ್ಮ ಸ್ವಂತ ಖರ್ಚಿನಲ್ಲಿ ಸಂದರ್ಶನಕ್ಕೆ ಹಾಜರಾಗಬೇಕು. ಸಂದರ್ಶನದ ದಿನಾಂಕವನ್ನು ನಂತರ ತಿಳಿಸಲಾಗುವುದು.

5) ಆಯ್ಕೆ ಪ್ರಕ್ರಿಯೆಯ ಯಾವುದೇ ಹಂತದಲ್ಲಾದರೂ, ಸದರಿ ಹುದ್ದೆಯ ಅನುಮತಿ ಮತ್ತು ಆಯ್ಕೆಯನ್ನು ಇಲಾಖಾ/ಸರಕಾರವು ರದ್ದುಪಡಿಸುವ ಅಧಿಕಾರವನ್ನು ಹೊಂದಿದ್ದು, ಅಭ್ಯರ್ಥಿಯು ಅರ್ಜಿಯನ್ನು ಸಲ್ಲಿಸಿದ ಅಥವಾ ಸಂದರ್ಶನಕ್ಕೆ ಹಾಜರಾದ ಮಾತ್ರಕ್ಕೆ ಸದರಿ ಹುದ್ದೆಗೆ ಯಾವುದೇ ಹಕ್ಕನ್ನು ಹೊಂದಿರುವುದಿಲ್ಲ.

ದಿನಾಂಕ: 01-03-2023

ಸಹಿ/- ಅಧ್ಯಕ್ಷರು,
ಎಂ.ಪಿ.ಇ. ಸೊಸೈಟಿ ಹೊನ್ನಾವರ